ಮಧ್ಯಂತರ ಅರ್ಜಿ **4** ಮತ್ತು **5** ರ ಮೇಲಿನ ಆದೇಶದಂತೆ ದಿನಾಂಕಃ **01.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **:** **2** ಮತ್ತು **3** ನೇ ಪ್ರತಿವಾದಿಗಳ ಪರ ವಕೀಲರಿಂದಃ

02. ನನ್ನ ತಂದೆಯ ಸ್ವಂತ ಊರು ಹನಕನಹಳ್ಳಿ ಇರುತ್ತದೆ. ನನ್ನ ತಂದೆಯ ತಂದೆಯಾದ ಚಂದ್ರಯ್ಯನ ಸ್ವಂತ ಊರು ಹಿರೇಹಡಗಲಿ ಇರುತ್ತದೆ. ಚಂದ್ರಯ್ಯನ ಹೆಂಡತಿ ಸರೋಜಮ್ಮನ ಸ್ವಂತ ಊರು ಹನಕನಹಳ್ಳಿ ಎಂದರೆ ಸರಿ. ಚಂದ್ರಯ್ಯ ಹನಕನಹಳ್ಳಿಗೆ ಬಂದು ನೆಲೆಸಿ ತನ್ನ ಹೆಂಡತಿ ಜೊತೆ ಹೊಟೆಲ್ ನಡೆಸುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂ. 1 ಮತ್ತು 2 ನ್ನು ಚಂದ್ರಯ್ಯ ಸ್ವಂತವಾಗಿ ಖರೀದಿ ಮಾಡಿದ್ದರು ಎಂದರೆ ಸರಿ. ದಾವಾ ಐಟಂ ನಂ. 3 ಚಂದ್ರಯ್ಯನಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ. 4 ರಿಂದ 7 ರ ಆಸ್ತಿಗಳು ಸರೋಜಮ್ಮನ ಆಸ್ತಿಗಳು ಎಂದರೆ ಅಲ್ಲ, ನಾನು ಹೇಳುತ್ತೇನೆ, ಅವೂ ಕೂಡ ಚಂದ್ರಯ್ಯನ ಆಸ್ತಿಗಳು. ಐಟಂ ನಂ. 4 ರಿಂದ 7 ರ ಆಸ್ತಿಗಳನ್ನು ಚಂದ್ರಯ್ಯ ಖರೀದಿ ಮಾಡಿದ್ದರು. ಚಂದ್ರಯ್ಯ ಅವುಗಳನ್ನು ಖರೀದಿ ಮಾಡಿದ್ದರು ಎಂಬ ಬಗ್ಗೆ ನಾನು ಕ್ರಯ ಪತ್ರಗಳು ಮತ್ತಿತರ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿದ್ದೇನೆ. ಸಾಕ್ಷಿಗೆ ಅಪರ ಪರವಾಗಿ ಗುರುತಿಸಿಕೊಂಡ ನಿಪಿ1 ರಿಂದ ನಿಪಿ17 ದಾಖಲೆಗಳನ್ನು ಕೈಗೆ ಕೊಟ್ಟು ಇವುಗಳಲ್ಲಿ ಚಂದ್ರಯ್ಯ ಐಟಂ ನಂ. 4 ರಿಂದ 7 ನ್ನು ಖರೀದಿ ಮಾಡಿದ್ದಾರೆಂದು ರುಜುವಾತುಪಡಿಸುವ ದಾಖಲೆಗಳನ್ನು ತೋರಿಸಿ ಎಂದು ಕೇಳಿದರೆ, ಸಾಕ್ಷಿಯು ನಾನು ವಿದ್ಯಾಭ್ಯಾಸ ಮಾಡಿಲ್ಲವಾದ್ದರಿಂದ ನನಗೆ ಗೊತ್ತಾಗುವುದಿಲ್ಲ ಎಂದು ಹೇಳಿದ್ದಾರೆ.

03. ದಾವಾ ಐಟಂ ನಂ. 1 ನ್ನು 2 ನೇ ಪ್ರತಿವಾದಿ ಶ್ರೀಮತಿ ಗೀತಾ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ5 ಕ್ರಯ ಪತ್ರಕ್ಕೆ ನನ್ನ ತಂದೆ ಲೇಟ್ ಪಿ.ಎಂ. ವೀರೇಶ ರವರು ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ5 ರ ನೋಂದಾಯಿತ ಕ್ರಯ ಪತ್ರದಲ್ಲಿ ನನ್ನ ತಂದೆಯ ಸಹಿಗಳು, ಹೆಬ್ಬೆಟ್ಟಿನ ಗುರುತು ಮತ್ತು ರಿಜಿಸ್ಟ್ರಾರ್ ಕಚೇರಿಯಲ್ಲಿ ತೆಗೆದ ಫೋಟೋ ಇರುತ್ತದೆ ಎಂದರೆ ನನ್ನ ತಂದೆ ಕಡೆಯಿಂದ ಮಾಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ. ನಿಪಿ5 ಕ್ರಯ ಪತ್ರಕ್ಕೆ ಚಂದ್ರಯ್ಯನ ಎಲ್ಲಾ ವಾರಸುದಾರರು ಒಪ್ಪಿಗೆ ಕೊಟ್ಟಿದ್ದಾರೆ ಎಂದರೆ ನಾನು ಮತ್ತು ನಮ್ಮ ತಾಯಿ ಒಪ್ಪಿಗೆ ಕೊಟ್ಟಿಲ್ಲ. ದಾವಾ ಐಟಂ ನಂ. 2 ನ್ನೂ ಕೂಡ ಸರೋಜಮ್ಮನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಮತ್ತು ನನ್ನ ತಾಯಿಗೆ ಮಾಹಿತಿ ಇಲ್ಲ. ಈ ಕ್ರಯ ಪತ್ರಕ್ಕೇ ಕೂಡ ನನ್ನ ತಂದೆ ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ. 2 ರ ಕ್ರಯ ಪತ್ರಕ್ಕೇ ಕೂಡ ಚಂದ್ರಯ್ಯನ ಎಲ್ಲಾ ವಾರಸುದಾರರ ಒಪ್ಪಿಗೆ ಇತ್ತು ಎಂದರೆ ಸರಿಯಲ್ಲ. ಐಟಂ ನಂ. 3 ರ ಆಸ್ತಿಯಲ್ಲಿ ಇದುವರೆಗೆ ಚಂದ್ರಯ್ಯನ ಅಣ್ಣ-ತಮ್ಮಂದಿರ ನಡುವೆ ಪಾಲುವಿಭಾಗವಾಗಿಲ್ಲ ಎಂದರೆ ಸರಿ. ಸದರಿ ಆಸ್ತಿಯು ನಿಪಿ3 ಮತ್ತು ನಿಪಿ4 ರ ಪ್ರಕಾರ ಈಗಲೂ ಚಂದ್ರಯ್ಯನ ತಂದೆ ಬಸವನಗೌಡನ

ಹೆಸರಿನಲ್ಲೇ ಇದೆ ಎಂದರೆ ಸರಿ. ಬಸವನಗೌಡನಿಗೆ 5 ಜನ ಮಕ್ಕಳು. ಅವರು ಹೆಸರುಗಳು ನನಗೆ ಗೊತ್ತಿಲ್ಲ. ಐಟಂ ನಂ. 5 ಮತ್ತು 6 ನ್ನು 1 ನೇ ಪ್ರತಿವಾದಿ ಬದುಕಿದ್ದಾಗ ಆಕೆಯು 2 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ. 7 ನ್ನು 3 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎಂದರೆ ನಮಗೆ ಒಪ್ಪಿಗೆ ಇರಲಿಲ್ಲ. ಈ ಎಲ್ಲಾ ದಾಖಲೆಗಳಿಗೆ ನನ್ನ ತಂದೆ ಸಹಿ ಮಾಡಿದ್ದಾರೆ ಎಂದರೆ ನನ್ನ ತಾಯಿ ಮತ್ತು ನಾನು ಸಹಿ ಮಾಡಿಲ್ಲ.

04. ನನ್ನ ತಂದೆ ಮಧ್ಯಪಾನ ಮಾಡುತ್ತಿದ್ದರು ಮತ್ತು ಜೂಜಾಟ ಆಡುತ್ತಿದ್ದರೆಂದು ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ . ನನ್ನ ತಂದೆಯ ದುಷ್ಚಟಗಳ ದುರುಪಯೋಗ ಮಾಡಿಕೊಂಡು ನನ್ನ ಅಜ್ಜಿ ನನ್ನ ತಂದೆಯಿಂದ ಆಸ್ತಿಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಳೆಂದು ಕೂಡ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯು ಪ್ರತಿವಾದಿಗಳ ಜೊತೆ ಶಾಮೀಲಾಗಿ ಎಲ್ಲಾ ಆಸ್ತಿಗಳನ್ನು ಪ್ರತಿವಾದಿಗಳಿಗೆ ದಾನ ಪತ್ರ ಮತ್ತು ಕ್ರಯ ಪತ್ರ ಮಾಡಿಕೊಟ್ಟಿದ್ದಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 01.07.2010, 26.06.2012 ಮತ್ತು 04.12.2015 ರ ಕ್ರಯ ಪತ್ರ ಗಳನ್ನು ಸೃಷ್ಟಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನನ್ನ ತಂದೆಯಿಂದ ಒತ್ತಾಯಪೂರ್ವಕವಾಗಿ ಸಾಕ್ಷಿ ಸಹಿಗಳನ್ನು ಮಾಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ, ಅಜ್ಜ ಮತ್ತು ಅಜ್ಜಿಯ ವೈದ್ಯಕೀಯ ಖರ್ಚುಗಳು ಮತ್ತು ಕುಟುಂಬದ ಖರ್ಚುಗಳಿಗಾಗಿ ನನ್ನ ಅಜ್ಜಿಯು ಈ ಆಸ್ತಿಗಳನ್ನು ಮಾರಾಟ ಮಾಡಿದ್ದಾಳೆ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಕ್ಯಾನ್ಸರ್ ಕಾಯಿಲೆ ಇತ್ತು ಎಂದರೆ ನಾವು ಅಜ್ಜಿಯ ಜೊತೆ ವಾಸ ಮಾಡುತ್ತಿರಲಿಲ್ಲವಾದ್ದರಿಂದ ನನಗೆ ಅದರ ಬಗ್ಗೆ ಗೊತ್ತಿಲ್ಲ. ವೈದ್ಯಕೀಯ ಖರ್ಚು ಮತ್ತು ಕುಟುಂಬದ ಖರ್ಚುಗಳಿಗೆ ಜರೂರಾಗಿ ಹಣ ಬೇಕಾಗಿದ್ದರಿಂದ ಬೇರೆಯವರಿಗೆ ಮಾರಾಟ ಮಾಡಿದರೆ ತೊಂದರೆಯಾಗುತ್ತದೆಂದು 2 ಮತ್ತು 3 ನೇ ಪ್ರತಿವಾದಿಗಳೇ ಸಂಪೂರ್ಣ ಹಣ ಕೊಟ್ಟು ಈ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

05. ನನ್ನ ತಾಯಿ ಮತ್ತು ಉಳಿದ ವಾದಿಗಳು 2010 ನೇ ಇಸವಿಯಿಂದಲೇ ನನ್ನ ತಂದೆಯನ್ನು ಬಿಟ್ಟು ಬೇರೆ ವಾಸ ಮಾಡುತ್ತಿದ್ದೇವೆ ಎಂದರೆ ನನ್ನ ತಂದೆ ಕುಡಿದು ನಮ್ಮನ್ನೆಲ್ಲಾ ಹೊಡೆಯುತ್ತಿದ್ದರಿಂದ 2010 ರಿಂದ ಅವರೇ ಬೇರೆ ವಾಸ ಮಾಡುತ್ತಿದ್ದರು. 2010 ರಲ್ಲಿ ನನ್ನ ತಂದೆಯಿಂದ ದೂರ ಹೋಗುವಾಗ ನಾವು ಟಿವಿ, ಅಲಮಾರ, ಪಾತ್ರೆ ಸಾಮಾನುಗಳು, ಬೆಳ್ಳಿ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದೆವು ಎಂದರೆ 4 ಸಾಮಾನುಗಳನ್ನು ಅಂದರೆ ಟಿವಿ, ಗಾಡ್ರೇಜ್, ಹೊಟೆಲ್ ಪಾತ್ರೆ ಸಾಮಾನು ಮತ್ತು ಟೇಬಲ್ ಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದೆವು. ಬಂಗಾರ ಬೆಳ್ಳಿ ಸಾಮಾನುಗಳನ್ನು ನನ್ನ ತಂದೆಯ ಸಹೋದರಿಯರು ತೆಗೆದುಕೊಂಡಿದ್ದಾರೆ.

06. ದಾವೆಯನ್ನು ನಮ್ಮ ಅಜ್ಜಿ ಸರೋಜಮ್ಮನ ವಿರುದ್ಧ ಕೂಡ ಹಾಕಿದ್ದೆವು ಎಂದರೆ ಸರಿ. ದಾವೆ ನಡೆಯುವಾಗ ಆಕೆ ತೀರಿಕೊಂಡಳು ಎಂದರೆ ಸರಿ. ತೀರಿಕೊಳ್ಳುವ ಮುಂಚೆ 1 ನೇ ಪ್ರತಿವಾದಿಗೆ ಕ್ಯಾನ್ಸರ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಚಿಕಿತ್ಸೆಗೆ ಸುಮಾರು ರೂ. 8 ರಿಂದ 10 ಲಕ್ಷ ಖರ್ಚಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜಿಯ ಚಿಕಿತ್ಸೆಗೆ ನಾವು ಖರ್ಚು ಮಾಡಿಲ್ಲ ಎಂದರೆ ಸರಿ. ಕೊನೆಯವರೆಗೆ 1 ನೇ ಪ್ರತಿವಾದಿಯ ಪೋಷಣೆಯನ್ನು ಆಕೆಯ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಗಳೇ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 02.01.2019 ರಂದು ನನ್ನ ಅಜ್ಜಿ 2 ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ವಿಲ್ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳಿಗೆ ದಾವಾ ಐಟಂ ನಂ. 3 ರಲ್ಲಿ ಬಿಟ್ಟರೆ ಉಳಿದ ಆಸ್ತಿಗಳಲ್ಲಿ ಪಾಲುವಿಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚಂದ್ರಯ್ಯನ ಸಹೋದರರು ಅವಶ್ಯಕ ಪಕ್ಷಕಾರರಾದ ಕಾರಣದಿಂದ ಅವರನ್ನು ಪಕ್ಷಕಾರರಾಗಿ ಮಾಡದೇ ಇರುವ ಕಾರಣಕ್ಕೆ ಐಟಂ ನಂ. 3 ರಲ್ಲೂ ನಾವು ಪಾಲುವಿಭಾಗಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.